ಸಿ.ಸಿ .ನಂ. 290/2023 ಪಿಡಬ್ಲ್ಯೂ: 1

ದಿನಾಂಕ: 23-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು: ಆರೋಪಿಯ ಪರವಾಗಿ: ಕುಮಾರಿ ಪಿ ಆರ್ ಎಸ್ ವಕೀಲರಿಂದ:**

3. ಸಾಲದ ವ್ಯವಹಾರ ನಡೆಯಿತು ಎಂದು ಹೇಳುವ ಸಂದರ್ಭದಲ್ಲಿ ನಾನು ಫಿರ್ಯಾದು ಶಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರಲಿಲ್ಲ. ನನಗೆ ಈ ಪ್ರಕರಣದ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ . ಆರೋಪಿ ಡ್ರೈವಿಂಗ್ ಕೆಲಸ ಮಾಡಿಕೊಂಡಿದ್ದರು . ಟೂರಿಸ್ಟ ವೆಹಿಕಲ್ ಡ್ರೈವಿಂಗ್ ಮಾಡುತ್ತಿದ್ದರು . ಅದರಿಂದ ಬಾಡಿಗೆ ಬರುತ್ತಿತ್ತು. ಬೇರೆಯವರ ಗಾಡಿಗೆ ಹೋಗುತ್ತಿದ್ದರು . ಅದರ ನಂತರ ನಮ್ಮಲ್ಲಿ ಲೋನ್ ಮಾಡಿ ಸ್ವಂತ ವಾಹನವನ್ನು ಖರೀದಿಸಿದ್ದರು . ಆರೋಪಿ ಖರೀದಿಸಿರುವ ವಾಹನ ಸೆಕೆಂಡೆಂಡ್ ವಾಹನ ಆಗಿತ್ತು . ಅದಕ್ಕೂ ಪೂರ್ವದಲ್ಲಿ ಅಗೆಸ್ತಿನ್ ಫರ್ನಾಂಡಿಸ್ ರವರು ಅದರ ಮಾಲೀಕರಾಗಿದ್ದರು. ಮೊದಲು ವಾಹನದ ಮೇಲೆ ಯಾವುದೇ ಸಾಲ ಇರಲಿಲ್ಲ. ನಾವು ವಾಹನ ಖರೀದಿಗೆ 1,50,000/- ರೂಪಾಯಿ ಸಾಲವನ್ನು ಆರೋಪಿಗೆ ನೀಡಿರುತ್ತೇವೆ . ಮಾರಾಟಗಾರರಿಗೆ ಹಣವನ್ನು ನಾವೇ ಸಂದಾಯ ಮಾಡಿದ್ದೇವೆ . ನಾವು ಹಣವನ್ನು ಆರೋಪಿಯ ಖಾತೆಗೆ ಹಾಕಿಲ್ಲ . ಮಾರಾಟಗಾರರ ಖಾತೆಗೆ ಹಾಕಿರುತ್ತೇವೆ . ವಾಹನವನ್ನು ಖರೀದಿಸುವಾಗ ವಾಹನದ ವ್ಯಾಲುವೇಶನ್ ರಿಪೋರ್ಟವನ್ನು ಪಡೆದುಕೊಳ್ಳಬೇಕಾಗುತ್ತದೆ ಎಂದರೆ ಸರಿ .

4. ಆರೋಪಿ ದಿ: 14-09-2018 ರಂದು ಸಾಲವನ್ನು ಮಂಜೂರು ಮಾಡಲಾಯಿತು . ಅದಕ್ಕೂ ಒಂದು ವಾರದ ಮುಂಚೆ ಸಾಲ ಕೇಳಿ ಬಂದಿದ್ದರು . ಆ ಸಮಯದಲ್ಲಿ ಅವರಿಂದ ದಾಖಲಾತಿಗಳನ್ನು ಪಡೆದುಕೊಳ್ಳುತ್ತೇವೆ . ಸಾಲದ ಅರ್ಜಿಯನ್ನು ಸಾಲ ಮಂಜೂರು ಆಗುವ ಎರಡು ದಿನ ಪೂರ್ವದಲ್ಲಿ ಪಡೆದುಕೊಳ್ಳುತ್ತೇವೆ . ಸಾಲದ ಅರ್ಜಿ ಇಲ್ಲದೇ ಸಾಲ ಮಂಜೂರು ಮಾಡಿಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಅವರು ಸಾಲದ ಅರ್ಜಿ ಕೊಟ್ಟ ನಂತರ ಅದನ್ನು ಹೆಡ್ ಆಫೀಸಿಗೆ ಕಳಿಸುತ್ತೇವೆ . ಅದು ಮಂಜೂರಾದ ಬಂದ

ಪಿಡಬ್ಲೂಃ 1

ನಂತರ ಸಾಲದ ಹಣವನ್ನು ಅರ್ಜಿದಾರರಿಗೆ ಕೊಡುತ್ತೇವೆ . ದಾಖಲಾತಿಗಳನ್ನು ಮೊದಲು ಪರಿಶೀಲಿಸಿ ನಂತರ ಅರ್ಜಿಯನ್ನು ಪಡೆದುಕೊಳ್ಳುತ್ತೇವೆ . ನಮ್ಮ ಮುಖ್ಯ ಕಚೇರಿಯಲ್ಲಿ ಕೆಲವೊಂದು ಸಾಲಗಳು ಮಂಜೂರಿ ಆಗದೇ ತಿರಸ್ಕೃತಗೊಳ್ಳುತ್ತವೆ ಎಂದರೆ ಸರಿ . ಆ ರೀತಿ ತಿರಸ್ಕೃತಗೊಂಡ ವ್ಯಕ್ತಿಗಳ ದಾಖಲಾತಿಗಳು ನಮ್ಮ ಸಹಕಾರಿಯಲ್ಲೇ ಇರುತ್ತವೆ ಎಂದರೆ ಸರಿಯಲ್ಲ . ಅವುಗಳನ್ನು ವಾಪಸ್ಸು ಕೊಡುತ್ತೇವೆ . ಸಾಲ ಮಂಜೂರಾಗಿದೆ ಅಥವಾ ತಿರಸ್ಕೃತವಾಗಿದೆ ಈ ಬಗ್ಗೆ ಅರ್ಜಿದಾರರಿಗೆ ನೋಟಿಸ್ ಕೊಡುವುದಿಲ್ಲ . ಸಾಮಾನ್ಯವಾಗಿ ಮೂರು ಕಂತುಗಳನ್ನು ಕಟ್ಟದಿದ್ದರೆ ಎನ್ ಪಿ ಎಸ್ ಆಗುತ್ತದೆ ಅದರ ನಂತರ ಮೂರು ನೋಟಿಸುಗಳನ್ನು ನೀಡುತ್ತೇವೆ . ಅದಕ್ಕೂ ಅವರು ಪೆಮೆಂಟ್ ಮಾಡದಿದ್ದರೆ ನಮ್ಮ ಕಂಪನಿ ಮುಂದಿನ ಕ್ರಮ ಕೈಗೊಳ್ಳುತ್ತವೆ . ಸದರಿ ಮೂರು ನೋಟಿಸುಗಳು ಆರೋಪಿಗೆ ಜಾರಿಯಾಗಿವೆ . ಆ ನೋಟಿಸುಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇರಲಿಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.